ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರ: 2284/2017

ಚಾಸಾ:11 ಪ್ರಾಸಾ:11

ದಿನಾಂಕ: 05.08.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಥಾಮ್ಸನ್ |
| ತಂದೆಯ ಹೆಸರು | : | ಮತಾಯ್ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಮುಖ್ಯ ಪೇದೆ |
| ವಾಸ ಸ್ಥಳ | : | ಬ್ರಹ್ಮಾವಾರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಭಾ. ದಂ. ಪ್ರ, ಸಂ, ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 2009 ರಿಂದ 2014ರವರೆಗೂ ಉಡುಪಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 26-10-2013 ರಂದು ನಿಸ್ತಂತು ಕೊಠಡಿಯಿಂದ ಬೆಳಿಗ್ಗೆ 9-50 ಗಂಟೆಗೆ ಉಡುಪಿಯ ಪುತ್ತೂರು ಗ್ರಾಮದಾ ನಿಟ್ಟೂರು ವಿಷ್ಣು ಮೂರ್ತಿ ದೇವಸ್ಥಾನದ ಹತ್ತಿರ ನಡೆದುಕೊಂಡು ಹೋಗುತ್ತಿದ್ದ ಹೆಂಗಸಿನ ಕುತ್ತಿಗೆಯಲ್ಲಿ ಇದ್ದ ಕರಿಮಣಿಯನ್ನು ಬಲತ್ಕಾರವಾಗಿ ಬೈಕಿನಲ್ಲಿ ಬಂದ ಇಬ್ಬರು ಕಿತ್ತು ಕೊಂಡು ಹೋಗಿರುವುದಾಗಿ ತಿಳಿಸಿದಂತೆ ವೃತ್ತ ನಿರೀಕ್ಷಕರ ಜೊತೆಯಲ್ಲಿ ನಾನು ಹಾಗೂ ಚಾಸಾ-12 ರವರು ರೌಂಡ್ಸ್ ಗೆ ತೆರಳಿದ್ದು ಬೆಳಗ್ಗೆ 10-30ರ ಸಮಯದಲ್ಲಿ ಕಟ್ಟೆ ಆಚಾರ್ಯ ಮಾರ್ಗದಲ್ಲಿ ಇನ್ನೊಂದು ಹೆಂಗಸಿನ ಕರಿಮಣಿಯನ್ನು ಎಳೆದುಕೊಂಡು ಹೋಗಿರುವುದಾಗಿ ಮಾಹಿತಿ ಬಂದ ಮೇರೆಗೆ ಪೊಲೀಸ ಅಧೀಕ್ಷಕರು ಉಡುಪಿರವರು ರಾ.ಹೆದ್ದಾರಿಯಲ್ಲಿ ವಾಹನ ತಪಾಸಣೆ ನಡೆಸುವಂತೆ ತಿಳಿಸಿದ್ದು ಅದರಂತೆ ನಾವುಗಳು ಉದ್ಯಾವರದಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದಾಗ ಕಾಪು ಉಪ ನಿರೀಕ್ಷಕರು ಕಾಪುವಿನಲ್ಲಿ ತಮ್ಮನ್ನು ನೋಡಿ ಇಬ್ಬರು ಬೈಕಿನಲ್ಲಿ ವಾಪಸ್ಸು ಉಡುಪಿ ಕಡೆಗೆ ಬರುತ್ತಿರುವುದಾಗಿ ತಿಳಿಸಿರುತ್ತಾರೆ.

ಅದರಂತೆ ನಾವು ಕಟಪಾಡಿ ಕಡೆಗೆ ಹೋಗಿ ಒಳದಾರಿಯ ತೆಕ್ಕಲ್ ತೋಟ ರಸ್ತೆಯಲ್ಲಿ ಯೂನಿಕಾನ್ ಬೈಕಿನಲ್ಲಿ ಬರುತ್ತಿದ್ದ ಇಬ್ಬರು ಅತೀ ವೇಗವಾಗಿ ಚಲಾಯಿಸಿ ನಮ್ಮನ್ನು ನೋಡಿ ಏಕಾಏಕಿ ಬ್ರೇಕು ಹಾಕಿ ಬಿದ್ದಿರುತ್ತಾರೆ. ಅನಂತರ ಓಡಿರುತ್ತಾರೆ. ಅವರನ್ನು ನಾನು ಹಾಗೂ ಚಾಸಾ-12 ರವರು ಬೆನ್ನಟ್ಟಿದ್ದು ನಮ್ಮ ಜೊತೆಯಲ್ಲಿ ಸಾರ್ವಜನಿಕರು ಸಹಕರಿಸಿದ್ದು, ನಂತರ ಅವರನ್ನು ವಶಕ್ಕೆ ಪಡೆದು ಪೊಲೀಸ್ ನಿರೀಕ್ಷಕರು ಅವರ ಅಂಗ ಶೋಧನೆ ಮಾಡಿದಾಗ ಆರೋಪಿ ಅಹಮ್ಮದ್ ಮುಕ್ತಾರ್ ಹಾಗೂ ಸಮೀರ್ ಬೇಗ್ ರವರ ಪ್ಯಾಂಟಿನ ಕಿಸೆಯಲ್ಲಿ ಉಡುಪಿ ನಗರ ಠಾಣೆಗೆ ಸಂಬಂಧಿಸಿದ ಪ್ರಕರಣದ ತುಂಡಾದ 2 ಎಳೆ ಕರಿಮಣಿ ಸರ ಹಾಗೂ ಮುಕ್ತಾರ್ ರವರ ಕಿಸೆಯಲ್ಲಿ ಪೊಲ್ಡಿಂಗ್ ಚಾಕು, ಪರ್ಸು, ಮೊಬೈಲು ಹಾಗೂ ಸಮೀರ್ ರವರ ವಶದಲ್ಲಿ ಮೊಬೈಲು ಹಾಗೂ ಪರ್ಸ್ ಇರುವುದು ಕಂಡು ಬಂದಿರುತ್ತದೆ.

ಅವುಗಳನ್ನು ನಂತರ ವಶಕ್ಕೆ ಪಡೆದು ಪಂಚನಾಮೆಯನ್ನು ಸ್ಥಳದಲ್ಲಿ 1 ರಿಂದ 3 ಗಂಟೆಯವರೆಗೂ ತಯಾರಿಸಿ ಸಾಕ್ಷಿದಾರರಾಗಿ ಚಾಸಾ-6 ಮತ್ತು 7 ರವರ ಸಮಕ್ಷಮ ಜರುಗಿಸಲಾಯಿತು.

ದಿಃ 08-12-2013 ರಂದು ಪೊಲೀಸ್ ಅಭಿರಕ್ಷೆಯಲ್ಲಿ ಇದ್ದ 4ನೇ ಆರೋಪಿ ತನ್ನೊಂದಿಗೆ ಬಂದಲ್ಲಿ ಕುಂದಾಪುರ ಹಾಗೂ ಕುಮಟಾ ಪೊಲೀಸ್ ಠಾಣೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಓಮ್ನಿ ಕಾರು, ಬೈಕು ಮತ್ತು ಚಿನ್ನಾಭರಣಗಳನ್ನು ತೋರಿಸಿಕೊಡುವುದಾಗಿ ತಿಳಿಸಿದಂತೆ ದಿಃ 07-12-2013 ರಂದು ಉಡುಪಿ ವೃತ್ತ ನಿರೀಕ್ಷಕರ ಜೊತೆಯಲ್ಲಿ ರಾತ್ರಿ 10 ಗಂಟೆಯಿಂದ ಠಾಣೆಯಿಂದ ಹೊರಟು 4ನೇ ಆರೋಪಿ ತೋರಿಸಿದಂತೆ ರಾಯಭಾಗ್ ನ ಕುಡಚಿ, ಕೊತ್ವಾಲ್ ಮೊಹಲ್ಲಾದ ತನ್ನ ಅಜ್ಜಿ ಸಲೋನಿ ಹಿಮ್ಮತ್ ಲಾಲ್ ರವರ ಮನೆಗೆ ಕರೆದುಕೊಂಡು ಹೋಗಿ ಮನೆಯ ಒಳಗೆ ಒಂದು ಕೋಣೆಯಲ್ಲಿ ಕಬ್ಬಿಣದ ಪೆಟ್ಟಿಗೆಯಲ್ಲಿ ಇಟ್ಟಿದ್ದ 2 ಕರಿಮಣಿ ಸರ ಹಾಗೂ ಮನೆಯ ಎದುರು ನಿಲ್ಲಿಸಿದ ಓಮ್ನಿ ಕಾರು ಎಂಎಚ್-09-ಬಿಎಂ-850 ಹಾಗೂ ಮನೆಯ ಉತ್ತರ ದಿಕ್ಕಿಗೆ ನಿಲ್ಲಿಸಿದ ಹೋಂಡಾ ಯುನಿಕಾನ್

ಬೈಕು ಕೆಎ-50-ಎಲ್-4273ನ್ನು ವೃತ್ತ ನಿರೀಕ್ಷಕರಿಗೆ ತೋರಿಸಿದಂತೆ ವಶಕ್ಕೆ ಪಡೆದಿರುತ್ತೇವೆ. ನಂತರ ಪಂಚನಾಮೆಯನ್ನು 9 ರಿಂದ 11 ಗಂಟೆಯವರೆಗೂ ತಯಾರಿಸಿರುತ್ತೇವೆ.

ಸಾಕ್ಷಿ ನಿಪಿ-9ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಕರಿಮಣಿ ಸರದ ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-17 ಎಂದು ಗುರುತಿಸಲಾಯಿತು.

ಸಾಕ್ಷಿ ದಿಃ 08-12-2013ರ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

**ಆರೋಪಿಗಳು ತಲೆಮರೆಸಿಕೊಂಡಿದ್ದರಿಂದ ವಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**